**ಓ.ಎಸ್. ನಂ. 22/2021** **ಡಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 23.8.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಜೆ.ಎಸ್.ಆರ್ ವಕೀಲರಿಂದಃ</u>

ನನ್ನ ಲಿಖಿತ ಹೇಳಿಕೆಯಲ್ಲಿ ರಂಗೇಗೌಡ, ಶಿವಲಿಂಗೇಗೌಡ, ಶಿವರುದ್ರೇಗೌಡ, ನಾರಾಯಣಗೌಡ ಮತ್ತು ಶಿವಣ್ಣೇಗೌಡರವರಿಗೆ ಯಾವ ಚೌತರ್ಪಿನೊಳಗೆ ಯಾವ ಆಸ್ತಿ ಬಂದಿರುತ್ತದೆ ಎಂದು ಹೇಳಲು ತೊಂದರೆ ಇರಲಿಲ್ಲ. ಸಾಮಾನ್ಯವಾಗಿ ವಿಭಾಗವಾದರೆ ಅವರ ಹೆಸರಿಗೆ ಖಾತೆಯಾಗಿ ಪ್ರತ್ಯೇಕ ಪೋಡಿಯಾಗುತ್ತದೆ ಎಂದರೆ ಸರಿ. ನಿಪಿ14 ರಿಂದ 18 ರಲ್ಲಿ ಎಲ್ಲರ ಹೆಸರು ಜಂಟಿಯಾಗಿರುತ್ತದೆ ಎಂದರೆ ಸಾಕ್ಷಿದಾರರು 84/2 ಮತ್ತು 85/2 ರ ಪಹಣಿಗಳು ಮಾತ್ರ ಜಂಟಿಯಾಗಿರುತ್ತದೆ ಎನ್ನುವರು. ಸರ್ವೆ ನಂ.14/2 ರಲ್ಲಿ ನನಗೆ ಪಾಲಿಗೆ ಬಂದಿರುವ 32 ಗುಂಟೆ ಆಸ್ತಿಯ ನಕಾಶೆಯನ್ನು ಮಾಡಿಸಿ ದುರಸ್ತಿ ಮಾಡಿಸಿರುತ್ತೇನೆ. ಆ ರೀತಿ ನಕಾಶೆ ಮಾಡಿಸಿದ ಸಮಯದಲ್ಲಿ ಮೇಲೆ ಹೇಳಿದ ರಂಗೇಗೌಡ, ಶಿವಲಿಂಗೇಗೌಡ, ಶಿವರುದ್ರೇಗೌಡ, ನಾರಾಯಣಗೌಡ ಮತ್ತು ಶಿವಣ್ಣೇಗೌಡರವರ ಮಕ್ಕಳಿಗೆ ನೋಟಿಸನ್ನು ನೀಡಲಾಗಿತ್ತು. ಆ ರೀತಿ ನೋಟಿಸ್ ನೀಡಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಾನು ಯಾವುದೇ ನೋಟಿಸ್ ನೀಡಿದೇ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನನಗೆ ಬೇಕಾದ ಆಸ್ತಿಯ ನಕಾಶೆಯನ್ನು ಮೋಸದಿಂದ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.14/2 ರ ಜಮೀನು ವಿಭಾಗವಾಗದಿರುವುದರಿಂದ ನಕಾಶೆಯನ್ನು ಮಾಡಿಸಿ, ದುರಸ್ತಿ ಮಾಡಿಸಿಕೊಳ್ಳಲು ನನಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ43 ರಂತೆ 3 ನೇ ಪ್ರತಿವಾದಿಗೆ 10 ರಿಂದ 12 ನೇ ಪ್ರತಿವಾದಿಯರು ಕ್ರಯಪತ್ರವನ್ನು ಮಾಡಿಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ44 ರ ವಿಭಾಗಪತ್ರದಲ್ಲಿ ಎಲ್ಲಾ ಪಿತ್ರಾರ್ಜಿತ ಆಸ್ತಿಯನ್ನು ಸೇರಿಸಿ ವಿಭಾಗ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ಸರ್ವೆ ನಂ.84 ಮತ್ತು 85 ನ್ನು ಬಿಟ್ಟು ವಿಭಾಗ ಮಾಡಿಕೊಂಡಿರುತ್ತೇವೆ ಎನ್ನುವರು. ಯಾವುದೇ ವಿಭಾಗವಾಗದಿದ್ದರೂ ಸಹ ಅಕ್ರಮ ಲಾಭ ಪಡೆಯಲು ಸರ್ವೆ ನಂ.14/2 ರ ಆಸ್ತಿಗೆ ಸಂಬಂಧಪಟ್ಟಂತೆ ನಿಪಿ44 ರಂತೆ ವಿಭಾಗಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ45 ರಂತೆ ನನ್ನ ಹೆಂಡತಿಗೆ ದಾನಪತ್ರ ಮಾಡಿಕೊಡಲು ನನಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಸಹೋದರರಿಗೆ ದಾವ 7 ರಿಂದ 9 ನೇ ಐಟಂ ಆಸ್ತಿಗಳನ್ನು ಮಾರಾಟ ಮಾಡಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಗಳು ವಿಭಾಗವಾಗಿರುವುದಿಲ್ಲ, ವಾದಿ ಮತ್ತು 1 ರಿಂದ 14 ನೇ ಪ್ರತಿವಾದಿಯರು ದಾವಆಸ್ತಿಗಳ ಜಂಟಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಆಸ್ತಿಯಲ್ಲಿ ವಾದಿಯರಿಗೂ ಸಹ ಭಾಗ ಇರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.